**ಈ ಸಾಕ್ಷಿಯನ್ನು ದಿನಾಂಕ 13.04.2023 ರಂದು ಪುನಃ ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.**

**ಮುಂದುವರಿದ ಪಾಟೀ ಸವಾಲುಃ ವಾದಿ ಪರಃ ಕೆ ವಿ ಕೆ ವಕೀಲರಿಂದಃ-**

ನಿಪಿ-1 ರಲ್ಲಿರುವ ದಿಃ 07-02-1958 ರ ಕ್ರಯಪತ್ರವನ್ನು ನೋಡಿ ಅದರಲ್ಲಿ ಬರೆಯಲಾದ ಮಾಹಿತಿಯನ್ನು ತಿಳಿದುಕೊಂಡಿರುತ್ತೇನೆ. ಸದರಿ ಕ್ರಯಪತ್ರ ಯಾವ ಸರ್ವೆ ನಂಬರಿಗೆ ಸಂಬಂಧಪಟ್ಟಂತೆ ಇರುತ್ತದೆ ಈಗ ನನಗೆ ಹೇಳಲು ಆಗುವುದಿಲ್ಲ. ಪೂಜಪ್ಪ ಮತ್ತು ದೊಡ್ಡಮಾರಪ್ಪರವರ ಮಧ್ಯೆ ವಿಶೇಷ ಜಿಲ್ಲಾಧಿಕಾರಿರವರ ಮುಂದೆ ಸರ್ವೆ ನಂಃ 122 ಮತ್ತು 28 ಗಳಿಗೆ ಸಂಬಂಧಿಸಿದಂತೆ ಪ್ರಕರಣ ನಂಃ 2868 ದಾಖಲಾದ ಬಗ್ಗೆ ನನಗೆ ಗೊತ್ತಿಲ್ಲ. ನಿಪಿ-2 ದಾಖಲೆಯನ್ನು ಓದಿ ತಿಳಿದುಕೊಂಡಿದ್ದೀರಾ ಎಂದರೆ ಸಾಕ್ಷಿಯು ಅದು ಫೋರ್ಜರಿ ದಾಖಲೆ ಇರುತ್ತದೆ ಎಂದು ನುಡಿಯುತ್ತಾರೆ. 2003 ರಲ್ಲಿ ನಾವು ಕ್ರಯಪತ್ರ ಮಾಡಿಕೊಳ್ಳುವ ಸಮಯದಲ್ಲಿ ನಿಪಿ-2 ದಾಖಲೆ ಇರಲಿಲ್ಲ ಮತ್ತು ಅದುದ ನಂತರದ ಸಮಯದಲ್ಲಿ ಅಸ್ಥಿತ್ವಕ್ಕೆ ಬಂದ ಕಾರಣ ಅದು ಫೋರ್ಜರಿ ದಾಖಲೆ ಎಂದು ನುಡಿಯುತ್ತಿದ್ದೇನೆ. ವಿಶೇಷ ಜಿಲ್ಲಾಧಿಕಾರಿರವರ ಕಚೇರಿಗೆ ನಿಪಿ-2 ನಿಜವಾದ ದಾಖಲೆಯೋ ಅಥವಾ ಫೋರ್ಜರಿ ದಾಖಲೆಯೋ ಎಂದು ತಿಳಿದುಕೊಳ್ಳಲು ನಾನು ವೈಯುಕ್ತಿಕವಾಗಿ ಯಾವುದೇ ಅರ್ಜಿ ಸಲ್ಲಿಸಿಲ್ಲ. ಸದರಿ ದಾಖಲೆಯ ಬಗ್ಗೆ ತಾಲ್ಲೋಕು ಕಚೇರಿಯಲ್ಲಿಯೂ ಸಹಾ ವಿಚಾರಣೆ ಮಾಡಿಲ್ಲ. ಸದರಿ ನಿಪಿ-2 ದಾಖಲೆಯ ಪ್ರಕಾರ ಪೂಜಪ್ಪರವರು ಕೇಳಿದ ಪರಿಹಾರವನ್ನು ತಿರಸ್ಕರಿಸಿ ದೊಡ್ಡಮಾರಪ್ಪನವರು ಕೇಳಿಕೊಂಡ ಪರಿಹಾರವನ್ನು ಪುರಸ್ಕರಿಸಿ ವಿಶೇಷ ಜಿಲ್ಲಾಧಿಕಾರಿರವರು ಆದೇಶ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಪ್ರಕರಣದಲ್ಲಿ ದೊಡ್ಡಮಾರಪ್ಪರವರೇ ಸರ್ವೆ ನಂಃ 122 ಮತ್ತು 28 ರ ಜಮೀನುಗಳಿಗೆ ಮಾಲೀಕರೆಂದು ಘೋಷಣೆ ಮಾಡಿ ಆದೇಶ ಮಾಡಿರುತ್ತಾರೆ ಎಂದರೆ ಸರಿಯಲ್ಲ.

ನಿಪಿ-2 ದಾಖಲೆಯ ನೈಜತೆಯ ಬಗ್ಗೆ ವಿಶೇಷ ಜಿಲ್ಲಾಧಿಕಾರಿರವರ ಕಚೇರೆಗ ಅರ್ಜಿ ಸಲ್ಲಿಸಿ ವಿಚಾರಣೆ ಮಾಡಲು ಯಾವುದೇ ತೊಂದರೆ ಇರಲಿಲ್ಲವಾ ಎಂದರೆ ಸಾಕ್ಷಿಯು ಅದರ ಅವಶ್ಯಕತೆ ಇರಲಿಲ್ಲ ಎಂದು ನುಡಿಯುತ್ತಾರೆ. ದೊಡ್ಡಮಾರಪ್ಪರವರು ಯಾವಾ ತೀರಿಕೊಂಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ನಿಪಿ-3 ರಲ್ಲಿ ಹಾಜರಿಸಿದ

This is a True Copy of the Court Records Online. Authenticated @ districts.ecourtsindia.com/cnr/KABC010183122011/truecopy/order-13.pdf

ಮರಣಪ್ರಮಾಣಪತ್ರದ ಬಗ್ಗೆ ನಾನು ತಿಳಿದುಕೊಂಡಿಲ್ಲ ಮತ್ತು ಅದರ ಅವಶ್ಯಕತೆ ಇಲ್ಲ ಎಂದು ನುಡಿಯುತ್ತಾರೆ.

ನಿಪಿ-2 ರಲ್ಲಿ ಹಾಜರಿಸಲಾದ ವಿಶೇಷ ಜಿಲ್ಲಾಧಿಕಾರಿರವರು ಮಾಡಿದ ಆದೇಶವನ್ನು ವೆಂಕಟರಾಜು ಎಂಬುವವರು ಮಾನ್ಯ ಉಚ್ಚ ನ್ಯಾಯಾಲಯದ ಮುಂದೆ ಡಬ್ಲ್ಯೂಪಿ ಸಂಃ 13283, 13620/2002 ರಲ್ಲಿ ಪ್ರಶ್ನಿಸಿದ್ದರು ಎಂದರೆ ನನಗೆ ಗೊತ್ತಿಲ್ಲ. ಮಾನ್ಯ ಉಚ್ಚ ನ್ಯಾಯಾಲಯವು ಸದರಿ ಡಬ್ಲ್ಯೂಪಿ ಸಂಃ 13283, 13620/2002 ಗಳನ್ನು ದಿಃ 21-03-2002 ರಂದು ನಿಪಿ-7 ರಂತೆ ವಜಾ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಆದೇಶವನ್ನು ಮಾನ್ಯ ಉಚ್ಚ ನ್ಯಾಯಾಲಯದ ದ್ವಿಸದಸ್ಯ ಪೀಠದ ಮುಂದೆ ರಿಟ್ ಅಪೀಲ್ ನಂಃ 2811, 2812/2002 ರಲ್ಲಿ ಪ್ರಶ್ನಿಸಲಾಗಿ, ದಿಃ 11-04-2002 ರಂದು ನಿಪಿ-8 ರಂತೆ ಸದರಿ ರಿಟ್ ಅಪೀಲನ್ನು ವಜಾ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ವಿಶೇಷ ಜಿಲ್ಲಾಧಿಕಾರಿರವರು ಸರ್ವೆ ನಂಃ 122 ಮತ್ತು 28 ಜಮೀನುಗಳಿಗೆ ಸಂಬಂಧಿಸಿದಂತೆ ಮಾಡಿದ ಆದೇಶ ಮಾನ್ಯ ಉಚ್ಚ ನ್ಯಾಯಾಲಯದ ಎರಡೂ ಪೀಠಗಳು ಎತ್ತಿ ಹಿಡಿದಿರುತ್ತವೆ ಎಂದರೆ ನನಗೆ ಗೊತ್ತಿಲ್ಲ. ಮಾನ್ಯ ಉಚ್ಚ ನ್ಯಾಯಾಲಯದ ದ್ವಿಸದಸ್ಯ ಪೀಠ ಮಾಡಿದ ಆದೇಶವನ್ನು ರಿವ್ಯೂ ಅರ್ಜಿಯ ಮೂಲಕ ಪ್ರಶ್ನಿಸಲಾಗಿದ್ದು, ಅದನ್ನು ನಿಪಿ-25 ರಂತೆ ವಜಾ ಮಾಡಲಾಗಿದೆ ಎಂದರೆ ನನಗೆ ಗೊತ್ತಿಲ್ಲ. ಸದರಿ ರಿವ್ಯೂ ಅರ್ಜಿಯನ್ನು ಅಶ್ವಥನಾರಾಯಣ ರೆಡ್ಡಿರವರು ಸಲ್ಲಿಸಿದ್ದರು ಎಂದರೆ ನನಗೆ ಗೊತ್ತಿಲ್ಲ.

ಕುಂದಲಹಳ್ಳಿ ಗ್ರಾಮಕ್ಕೆ ಸೇರಿದ ಸರ್ವೆ ನಂಃ 122 ರ ಒಟ್ಟು ಕ್ಷೇತ್ರ 1 ಎಕರೆ 19 ಗುಂಟೆ ವಿಸ್ತೀರ್ಣ ಇರುತ್ತದೆ ಎಂದರೆ ಸರಿಯಲ್ಲ. ಸದರಿ ಸ್ವಶೆ ನಂಃ 122 ರ ಜಮೀನಿನ ಮೇಲೆ ದೊಡ್ಡಮಾರಪ್ಪನವರನ್ನು ಹೊರತುಪಡಿಸಿ ಬೇರೆ ಯಾರಿಗೂ ಯಾವುದೇ ತರಹದ ಹಕ್ಕು ಇರುವುದಿಲ್ಲ ಎಂದರೆ ನನಗೆ ಗೊತ್ತಿಲ್ಲ. ದೊಡ್ಡಮಾರಪ್ಪನವರು ತಮ್ಮ ಜೀವಿತ ಅವಧಿಯಲ್ಲಿ ವಾದಿಯರ ಪರವಾಗಿ ದಿಃ 10-01-1991 ರಂದು ಸರ್ವೆ ನಂಃ 122 ರಲ್ಲಿ 17 ಗುಂಟೆ ಜಮೀನಿಗೆ ಸಂಬಂಧಿಸಿದಂತೆ ಮೃತ್ಯು ಪತ್ರ ಬರೆದಿದ್ದರು ಎಂದರೆ ನನಗೆ ಗೊತ್ತಿಲ್ಲ. ನಿಪಿ-9 ರಲ್ಲಿ ವಾದಿಯರು ಹಾಜರಿಸಿದ ಮೃತ್ಯುಪತ್ರವನ್ನು ಓದಿ ತಿಳಿದುಕೊಂಡಿದ್ದೀರಾ ಎಂದರೆ ಸಾಕ್ಷಿಯು ಅದರ ಅವಶ್ಯಕತೆ ನಮಗೆ ಇಲ್ಲ ಎಂದು ನುಡಿಯುತ್ತಾರೆ. ನಿಪಿ-9 ರಲ್ಲಿ ಉಲ್ಲೇಖಿಸಲಾದ ಆಸ್ತಿಯ ಮೇಲೆ ನಮಗೆ ಯಾವುದೇ ತರಹದ ಅಧಿಕಾರ ಮತ್ತು ಹಕ್ಕು ಇರುವುದಿಲ್ಲ ಎಂದರೆ ಸರಿಯಲ್ಲ.

This is a True Copy of the Court Records Online. Authenticated @ districts.ecourtsindia.com/cnr/KABC010183122011/truecopy/order-13.pdf

ಈ ದಾವೆಯಲ್ಲಿಯ ದಾವಾ ಆಸ್ತಿ ಸರ್ವೆ ನಂ: 122/4 ಇದ್ದು, ಅದರ ವಿಸ್ತೀರ್ಣ 6 ಗುಂಟೆ ಇರುತ್ತದೆ. ಸರ್ವೆ ನಂ: 122 ಯಾವಾಗ ಪೋಡಿಯಾಗಿರುತ್ತದೆ ಮತ್ತು ಎಷ್ಟು ಭಾಗಗಳಾಗಿ ವಿಂಗಡೆಯಾಗಿರುತ್ತದೆ ಎಂದು ಗೊತ್ತಿಲ್ಲ. ಮಾರ್ಚ 2003 ರಲ್ಲಿ ಸರ್ವೆ ನಂ: 122/4 ರಲ್ಲಿ 6 ಗುಂಟೆ ವಿಸ್ತೀರ್ಣಕ್ಕೆ ಸಂಬಂಧಿಸಿದಂತೆ ನಮ್ಮ ಕ್ರಯಪತ್ರವಾಗಿರುತ್ತದೆ. ಸದರಿ ಜಮೀನನ್ನು ಲಕ್ಷ್ಮಮ್ಮ ಮತ್ತು ಸುಬ್ರಮಣಿ ಹಾಗೂ ಇತರರ ಕಡೆಯಿಂದ ಕ್ರಯಕ್ಕೆ ಪಡೆದಿರುತ್ತೇವೆ. ನಾವು ಕ್ರಯಕ್ಕೆ ಪಡೆದ ಜಮೀನಿನ ಪೂರ್ವಕ್ಕೆ ಖಾಲಿ ಜಾಗ, ಪಶ್ಚಿಮಕ್ಕೆ ಶ್ರೀನಿವಾಸ್ ರವರಿಗೆ ಸೇರಿದ ಜಾಗ, ಉತ್ತರಕ್ಕೆ ರೆಡ್ಡಿ ಎಂಬುವವರಿಗೆ ಸೇರಿದ ಆಸ್ತಿ ಮತ್ತು ದಕ್ಷಿಣಕ್ಕೆ ಕುಮಾರರೆಡ್ಡಿರವರಿಗೆ ಸೇರಿದ ಆಸ್ತಿ ಇರುತ್ತದೆ. ಸಾಕ್ಷಿಗೆ ನಿಡಿ-10 ಕ್ರಯಪತ್ರದಲ್ಲಿರುವ ಆಸ್ತಿ ಮತ್ತು ವಾದಪತ್ರದಲ್ಲಿ ಕಾಣಿಸಲಾದ ದಾವಾ ಆಸ್ತಿ ಎರಡೂ ಒಂದೇ ಇರುತ್ತವೆ. ಸದರಿ ನಿಡಿ-10 ಕ್ರಯಪತ್ರದಲ್ಲಿ ಕಾಣಿಸಲಾದ ಆಸ್ತಿಯ ಚಕ್ಕುಬಂಧಿಗೂ, ವಾದಪತ್ರದಲ್ಲಿ ಕಾಣಿಸಲಾದ ಚಕ್ಕುಬಂಧಿಗೂ ಯಾವುದೇ ವ್ಯತ್ಯಾಸ ಇರುವುದಿಲ್ಲ. ವಾದಪತ್ರದ ದಾವಾ ಆಸ್ತಿಯ ಪಶ್ಚಿಮಕ್ಕೆ 30 ಅಡಿ ರಸ್ತೆ ಎಂದು ಕಾಣಿಸಲಾಗಿದೆ ಎಂದರೆ ಸರಿಯಲ್ಲ. ವಾದಪತ್ರದ ದಾವಾ ಆಸ್ತಿಯ ದಕ್ಷಿಣಕ್ಕೆ ವಾದಿಯರಿಗೆ ಸೇರಿದ ಸರ್ವೆ ನಂ: 122/3 ಆಸ್ತಿ ಇರುವ ಬಗ್ಗೆ ಕಾಣಿಸಲಾಗಿದೆ ಎಂದರೆ ಸರಿಯಲ್ಲ. ನಿಡಿ-10 ರಲ್ಲಿ ಕಾಣಿಸಲಾದ ಆಸ್ತಿಯ ದಕ್ಷಿಣಕ್ಕೆ ಕುಂಟರಾಮರೆಡ್ಡಿ ರವರ ಆಸ್ತಿ ಎಂದು ಕಾಣಿಸಲಾಗಿದ್ದು, ಅದು ಯಾವ ಸರ್ವೆ ನಂಬರ್ ನಲ್ಲಿದೆ ಗೊತ್ತಿಲ್ಲ. ಪಶ್ಚಿಮಕ್ಕೆ ಡಿ.ಟಿ.ಶ್ರೀನಿವಾಸ್ ರವರ ಆಸ್ತಿ ಸರ್ವೆ ನಂ: 123 ರಲ್ಲಿ ಇರಬಹುದು. ಪೂರ್ವಕ್ಕೆ ಖಾಲಿ ಜಾಗ ಎಂದು ಕಾಣಿಸಿದ್ದು, ಅದರ ಸರ್ವೆ ನಂಬರ್ ನನಗೆ ಗೊತ್ತಿಲ್ಲ.

ನಿಡಿ-16 ರಲ್ಲಿರುವ ದಾಖಲೆಯ ಪ್ರಕಾರ ಸರ್ವೆ ನಂ: 125 ಮತ್ತು 122/4 ನ್ನು ಕೂಡಿಸಿ, ಭೂ ಪರಿವರ್ತನೆ ಮಾಡಿದ ದಾಖಲೆಯಾಗಿರುತ್ತದೆ. ಹಾಗೆ ಭೂ ಪರಿವರ್ತನೆ ಆಗುವ ಪೂರ್ವದಲ್ಲಿ ಸದರಿ ಎರಡೂ ಜಮೀನುಗಳ ಸರ್ವೆ ಆಗಿರುತ್ತದೆ. ಸದರಿ ನಿಡಿ-16 ರ ದಾಖಲೆಯಲ್ಲಿ ಷೆಡ್ಯೂಲ್‌ನ ವಿವರ ನೀಡಿ ಅದರಲ್ಲಿ ಕಾಣಿಸಲಾದ ಚಕ್ಕುಬಂಧಿ ಸರಿಯಾಗಿರುತ್ತದೆ. ಹಾಗೆ ಸರ್ವೆಯಾದ ಬಗ್ಗೆ ಪೋಡಿ ದಾಖಲೆ ಕೊಟ್ಟಿರುವುದಾಗಿ ನುಡಿಯುತ್ತಾರೆ. ಸರ್ವೆನಂ: 125 ಮತ್ತು ಸರ್ವೆ ನಂ: 122/4 ಎರಡೂ ಅಕ್ಕಪಕ್ಕದಲ್ಲಿ ಇರುತ್ತವೆ. ಕುಂದಲಹಳ್ಳಿ ಗ್ರಾಮಕ್ಕೆ ಸೇರಿದ ನಕಾಶೆಯನ್ನು ನಾನು ನೋಡಿರುತ್ತೇನೆ. ಸದರಿ ನಕಾಶೆಯನ್ನು ತೋರಿಸಿದಲ್ಲಿ ಅದರಲ್ಲಿ ಮೇಲೆ ಹೇಳಲಾದ ಸರ್ವೆ

This is a True Copy of the Court Records Online. Authenticated @ districts.ecourtsindia.com/cnr/KABC010183122011/truecopy/order-13.pdf

www.ecourtsindia.com

www.ecourtsindia.com



ನಂಬರುಗಳನ್ನು ಗುರುತಿಸಲು ಆಗುವುದಿಲ್ಲ. ನನಗೆ ಕನ್ನಡ ಓದಲು ಬರುತ್ತದೆ. ಇದೀಗ ಸಾಕ್ಷಿಗೆ ತೋರಿಸಲಾದ ದಾಖಲೆಯನ್ನು ನೋಡಿ ಅದರಲ್ಲಿ ಕುಂದಲಹಳ್ಳಿ ಎಂದು ಬರೆಯಲಾಗಿದೆ ಎಂದು ಹೇಳುತ್ತಾರೆ. ಕುಂದಲಹಳ್ಳಿ ಗ್ರಾಮಕ್ಕೆ ಸೇರಿದ ಗ್ರಾಮ ನಕಾಶೆಯನ್ನು ಹಾಜರಿಸಲು ಏನಾದರೂ ತೊಂದರೆ ಇದೆಯಾ ಎಂದರೆ ಸಾಕ್ಷಿಯು ಕಾಲಾವಕಾಶ ನೀಡಿದ್ದಲ್ಲಿ ಹಾಜರಿಸುತ್ತೇನೆ ಎಂದು ನುಡಿಯುತ್ತಾರೆ. ಸರ್ವೆ ದಾಖಲೆಗಳಲ್ಲಾಗಲೀ, ಕುಂದಲಹಳ್ಳಿ ಗ್ರಾಮ ನಕ್ಷೆಯಲ್ಲಾಗಲೀ ಸರ್ವೆ ನಂಃ 125 ಮತ್ತು ಸರ್ವೆ ನಂಃ 122/4 ಅಕ್ಕಪಕ್ಕದಲ್ಲಿ ಇರುವುದಿಲ್ಲ ಎಂದರೆ ಸರಿಯಲ್ಲ.

ಸರ್ವೆ ನಂಃ 122/4 ರ ಪಶ್ಚಿಮಕ್ಕೆ ಸರ್ವೆ ನಂಃ 125 ಇರುತ್ತದೆ. ಸರ್ವೆ ನಂಃ 125 ನ್ನು ಬಿ.ಟಿ.ಶ್ರೀನಿವಾಸ್ ರವರು ಖರೀದಿಸಿರುತ್ತಾರೆ. ನಿಡಿ-16 ರಲ್ಲಿ ಕಾಣಿಸಲಾದ ಚಕ್ಕುಬಂಧಿಗೂ ನಿಡಿ-6 ರಲ್ಲಿ ಕಾಣಿಸಲಾದ ಚಕ್ಕುಬಂಧಿಗೂ ಹೊಂದಾಣಿಕೆ ಇರುವುದಿಲ್ಲ ಎಂದರೆ ಸರಿಯಲ್ಲ. ನಿಡಿ-16 ರಲ್ಲಿ ಕಾಣಿಸಲಾದ ಆಸ್ತಿಯ ಉತ್ತರಕ್ಕೆ ರಸ್ತೆ ಎಂದು ತೋರಿಸಿದು, ನಿಡಿ-6 ಸರ್ವೆಯರ್ ಸ್ಕೆಚ್‌ನಲ್ಲಿ ಉತ್ತರದ ಕಡೆ ರಸ್ತೆ ಕಾಣಿಸಲಾಗಿದೆಯಾ ಎಂದರೆ ಸಾಕ್ಷಿಯು ಎರಡೂ ಸರ್ವೆ ನಂಬರುಗಳನ್ನು ಒಟ್ಟು ಗೂಡಿಸಿದ ನಂತರ ರಸ್ತೆ ಇದೆ ಎಂದು ನುಡಿಯುತ್ತಾರೆ. ನಿಡಿ-6 ರ ಸರ್ವೆಯರ್ ಸ್ಕೆಚ್ ನಲ್ಲಿ ಕಾಣಿಸಲಾದ ಆಸ್ತಿಯ ಯಾವುದೇ ದಿಕ್ಕಿನಲ್ಲಿ ಸರ್ವೆ ನಂಃ 125 ಕಾಣಿಸುತ್ತಿದೆಯಾ ಎಂದರೆ ಸಾಕ್ಷಿಯು ಕಾಣಿಸುತ್ತಿಲ್ಲ ಎಂದಿದ್ದಾರೆ.

**(ಮುಂದುವರಿದ ಪಾಟೀಸವಾಲಿಗಾಗಿ ಕಾಲಾವಾಶಕೋರಿದ್ದರಿಂದ ಪಾಟೀಸವಾಲನ್ನು ಮುಂದೂಡಲಾಯಿತು).**

ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯು ಹೇಳಿಕೆಯನ್ನು ದಿನಾಂಕಃ 13.04.2023 ರಂದು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು.

ಓ. ಹೇ. ಕೇ. ಸರಿ ಇದೆ

63ನೇ ಅಪರ ಸಿವಿಲ್ ಮತ್ತು ಸತ್ರ ನ್ಯಾಯಾಧೀಶರು,
ಸಿಸಿಹೆಚ್-64, ಸಿಸಿಸಿ, ಬೆಂಗಳೂರು.

This is a True Copy of the Court Records Online. Authenticated @ districts.ecourtsindia.com/cnr/KABC010183122011/truecopy/order-13.pdf